# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1018 |
| ಸದಸ್ಯರ ಹೆಸರು | : | ಶ್ರೀ ಕೆ. ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 22.12.2021 |
| ಉತ್ತರಿಸುವ ಸಚಿವರು | : | ಮಾನ್ಯ ಕಂದಾಯ ಸಚಿವರು |

| ಪ್ರಶ್ನೆ | ಉತ್ತರ |
|---|---|
| (ಅ) ರಾಜ್ಯದಲ್ಲಿ ಈ ಬಾರಿ ರೈತರು ಬೆಳೆದ ಬೆಳೆಯು ಅಕಾಲಿಕ ಮಳೆಗೆ ತುತ್ತಾಗಿ ನೀರು ಪಾಲಾಗಿ ದ್ದು, ಸರ್ಕಾರದ ಮಾನದಂಡದ ಪ್ರಕಾರ ಪರಿಹಾರ ಕೊಡಲು ಬರುವುದಿಲ್ಲವಾದ್ದರಿಂದ ಇದು ರೈತರಿಗೆ ದೊಡ್ಡ ಆಘಾತವನ್ನುಂಟು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಪ್ರಸಕ್ತ ಸಾಲಿನ ಪ್ರವಾಹದಿಂದ ಒಟ್ಟು 12.54 ಲಕ್ಷ ಹೆಕ್ಟೇರ್ ಬೆಳೆ ಹಾನಿಯಾಗಿದೆ.<br>ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಇನ್‌ಪುಟ್ ಸಬ್ಸಿಡಿ ಪಾವತಿಸಲು ರೂ.1112 ಕೋಟಿ ಅವಶ್ಯವಿದ್ದು, ಈ ವರೆಗೂ ಪರಿಹಾರ ತಂತ್ರಾಂಶದ ಮೂಲಕ 12.66 ರೈತರ ಬ್ಯಾಂಕ್ ಖಾತೆಗೆ ನೇರವಾಗಿ ರೂ.852.41 ಕೋಟಿಗಳನ್ನು ಜಮೆ ಮಾಡಲಾಗಿದೆ. |
| (ಆ) ಈ ಕುರಿತು ಸರ್ಕಾರ ಪರಿಹಾರ ನೀಡುವ ನಿಟ್ಟಿನಲ್ಲಿ 2015ರ ನಿಗಧಿಯಾದ NDRF ಒಂದು ಹೆಕ್ಟೇರ್ ನೀರಾವರಿ ಬೆಳೆಗೆ 13.500 ರೂ. (ಎಕರೆಗೆ 5.400ರೂ) ಹಾಗೂ ಖುಷ್ಕಿ ಬೆಳೆಗೆ 6,800 ರೂ (ಎಕರೆಗೆ 2750ರೂ) ಪರಿಹಾರ ನಿಗದಿಗೊಳಿಸಲಾಗಿದ್ದು, ಈ ಮೊತ್ತವು ಆರು ವರ್ಷದ ಹಿಂದೆ ನಿಗದಿಯಾಗಿದ್ದಾಗಿರುವುದರಿಂದ ಪರಿಹಾರದ ಮೊತ್ತವನ್ನು ಪರಿಷ್ಕರಿಸಿ ರೈತರಿಗೆ ನೆರವು ನೀಡುವಲ್ಲಿ ಸರ್ಕಾರದ ನಿಲುವೇನು? (ವಿಸ್ತೃತ ಮಾಹಿತಿಯನ್ನು ಒದಗಿಸುವುದು) | ಪ್ರಕೃತಿ ವಿಕೋಪ ಬೆಳೆ ಹಾನಿಗೆ ಇನ್‌ಪುಟ್ ಸಬ್ಸಿಡಿ ಪಾವತಿ ದರ ಕೇಂದ್ರ ಸರ್ಕಾರದ ಗೃಹ ಮಂತ್ರಾಲಯದ ವತಿಯಿಂದ ಪ್ರತಿ 5 ವರ್ಷಕ್ಕೊಮ್ಮೆ ಪರಿಷ್ಕರಿಸಲಾಗುತ್ತದೆ.<br>ರಾಜ್ಯ ಸರ್ಕಾರದಿಂದ ಪರಿಹಾರ ದರ ಹೆಚ್ಚಳ ಮಾಡಲು ಸೂಕ್ತ ಸ್ಪಷ್ಟೀಕರಣದೊಂದಿಗೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.<br>2020 ನೇ ಸಾಲಿನಲ್ಲಿ ದರ ಪರಷ್ಕರಿಸಬೇಕಿದ್ದು, ಈ ವರೆಗೂ ಕೇಂದ್ರ ಸರ್ಕಾರದಿಂದ ದರ ಪರಿಷ್ಕರಣೆಯಾಗಿರುವುದಿಲ್ಲ. |

ಕಂಇ 585 ಟಿಎನ್‌ಆರ್ 2021

(ಆರ್. ಅಶೋಕ)
ಕಂದಾಯ ಸಚಿವರು